# ಹೋರಾಟದ ಹಾಡುಗಳ ಮೇಲೆ ಅಂಬೇಡ್ಕರ್‌ವಾದದ ಪ್ರಭಾವ

ಡಾ.ಹೊಂಬಯ್ಯ,
ಮುಖ್ಯಸ್ಥರು,
ಕನ್ನಡವಿಭಾಗ,
ಶ್ರೀಮತಿ ಕುಸುಮಾವತಿ ಮಿರಜಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಬೇಡಕಿಹಾಳ.
ಮೊ: ೯೯೬೪೦೧೮೧೧೨

"Tell the slave he is slave ad will revolt"[೧] ಅಂಬೇಡ್ಕರ್ ತಮ್ಮ ಜೀವನದುದ್ದಕ್ಕೂ ಹೇಳಿದ ಮಾತಿದು ಸಾವಿರಾರು ವರ್ಷಗಳ ಕಾಲ ಮಲಗಿದ್ದ ಜನಾಂಗವನ್ನು ಬಡಿದೆಬ್ಬಿಸುವ ಸಲುವಾಗಿ ಅವರು ಹಮ್ಮಿಕೊಂಡಿದ್ದು ಸಂಘಟನೆ, ಹೋರಾಟ ಮತ್ತು ಶಿಕ್ಷಣ ಎಂಬ ಮಂತ್ರಗಳಾಗಿದ್ದವು. ಇವುಗಳ ಮೂಲಕ ದಲಿತ ಸಮುದಾಯವು ಎತ್ತೇಚ್ಚ ಸಿಂಹಗಳಾಗಿ ರೂಪಗೊಂಡು, ತಮ್ಮ ಮೇಲೆ ನಡೆಯುತ್ತಿರುವ ಅಸಮಾನತೆಯ ಮತ್ತು ದೌರ್ಜನ್ಯದ ವಿರುದ್ಧ ಹೋರಾಟವನ್ನು ಮಾಡಿ, ತನ್ನ ಅಸ್ತಿತ್ವನವನ್ನು ಪಡೆದುಕೊಳ್ಳುವಂತಗಾಬೇಕು ಎಂದು ಕರೆನೀಡುತ್ತಿದ್ದರು. ಅಂಬೇಡ್ಕರ್ ಅವರು ಬಾಲ್ಯದಿಂದ ಹೋರಾಟದ ಮನೋಭಾವವನ್ನು ಬೆಳಸಿಕೊಂಡು ಬಂದವರು. ಅವರ ಕೊನೆಗಾಲದ ದಿನಮಾನದವರೆಗೂ ಯಾವ ವಿಷಯಗಳಿಗೂ ಒಳಗಾಗಾದ ಹೋರಾಟ ಪ್ರೇಮಿಯಾಗಿ ಬದುಕಿದವರು ಅಂಬೇಡ್ಕರ್. ಇವರ ಚಿಂತನೆಗಳಿಂದ ದಲಿತ ಸಾಹಿತ್ಯವು ಹೆಮ್ಮರವಾಗಿ ಬೆಳದು ಬಂದಿದೆ. ಜೊತೆಗೆ ಹೋರಾಟದ ಸಾಗರಕ್ಕೆ ದನಿಯಾದವರು ಅಂಬೇಡ್ಕರ್ ಅವರ ಬರಹಗಳು ಎಂದರೇ ತಪ್ಪಾಗಲಾರದು. ದಲಿತ ಸಾಹಿತ್ಯಕ್ಕೆ ಅಂಬೇಡ್ಕರ್ ವಿಚಾರಧಾರೆ ಮೂಲನೆಲೆಯಾಗಿ ಕಂಡುಬರುತ್ತದೆ. ದಲಿತ ಸಾಹಿತ್ಯಕ್ಕೆ ಅವರು ಸ್ಫೂರ್ತಿಯ ಚಿಲುಮೆಯಾಗಿದ್ದರು. ಸ್ವಾತಂತ್ರ್ಯ, ಸಮಾನತೆ, ಸೋದರತ್ವ ಮುಂತಾದವು ಅಂಬೇಡ್ಕರ್‌ವಾದದ ಸೂತ್ರಗಳು ಇವು ಹೋರಾಟದ ಹಾಡುಗಳು ಹುಟ್ಟಲು ಪ್ರೇರಕ ಶಕ್ತಿಗಳಾಗಿದ್ದವು.

ಜನಸಮುದಾಯದಲ್ಲಿನ ಎಲ್ಲಾ ಬಗೆಯ ಅಸಮಾನತೆ ಕ್ರೌರ್ಯ ಮತ್ತು ಶೋಷಣೆಯ ವಿರುದ್ಧ ತುಳಿತಕ್ಕೊಳಗಾದವರೆಲ್ಲರೂ ಜೊತೆಗೂಡಬೇಕು. ಇವರೆಲ್ಲರ ಸಮುದಾಯ ತಾರತಮ್ಯ ರಹಿತ ಜೀವನ ಸಾಧಿಸಬೇಕೆಂಬುದೇ ಅಂಬೇಡ್ಕರ್‌ವಾದದ ನಿಲುವು. ಈ ವಾದವು ಒಟ್ಟು ಜನ ಸಮುದಾಯದ ನೆಲೆಯಲ್ಲಿ ಕಂಡು ಬರುತ್ತದೆ. ಅಸ್ಪೃಶ್ಯತೆ ಎಂಬುವುದು ಭಾರತೀಯ ಸಮಾಜಕ್ಕೆ ಅಂಟಿದ ಬಹುದೊಡ್ಡ ಕಳಂಕ. ನಾಡಿನ ಜನಸಂಖ್ಯೆಯ

೧/೫ ಭಾಗದಷ್ಟು ಜನರು ಶತಶತಮಾನಗಳಿಂದಲೂ ಸಮಾಜದ ಮೇಲುಸ್ತರದವರಿಂದ ಶೋಷಣೆಗೆ ಒಳಗಾಗಿ ಬಂದಿದ್ದಾರೆ. ಭಾರತದಲ್ಲಿ ಅವರ್ಣೀಯರು ಅತಿಶೂದ್ರರು ಪಂಚಮರೆಂದು ಕರೆಸಿಕೊಳ್ಳುತ್ತಿದ್ದ ಜನರನ್ನು ಊರ ಹೊರಗೆ ಪ್ರತ್ಯೇಕವಾಗಿ ಇಡಲಾಗಿದ್ದು, ಇಂತಹ ಜನರ ನೋವಿಗೆ ಸ್ಪಂದಿಸಿದವರು ಅಂಬೇಡ್ಕರ್. ಇವರು ಭಾರತದಲ್ಲಿ ದಲಿತ ಸಮುದಾಯದ ಏಳಿಗೆಯೇ ತಮ್ಮ ಧ್ಯೇಯವೆಂದು ನಂಬಿದ್ದರು. ಜಾತಿ ವಿನಾಶ ಕುರಿತು ಹೋರಾಟದ ಹಾಡುಗಳು ಹೆಚ್ಚು ರಚನೆಯಾದದ್ದು ದಲಿತ ಮತ್ತು ಬಂಡಾಯದ ಕಾಲಘಟ್ಟದಲ್ಲಿ ಈ ಸಂದರ್ಭದಲ್ಲಿ ಬಂದ ಕವಿಗಳ ಹಾಗೂ ಸಾಹಿತ್ಯ ಕೃತಿಗಳ ಮೇಲೆ ಅಂಬೇಡ್ಕರ್‌ವಾದದ ಪ್ರಭಾವವನ್ನು ಹೀಗೆ ಗುರುತಿಸಬಹುದು.

ಸಿದ್ಧಲಿಂಗಯ್ಯ- ಹೊಲೆಮಾದಿಗರ ಹಾಡು, ಸಾವಿರಾರು ನದಿಗಳು, ಕಪ್ಪುಹಾಡಿನ ಹಾಡು ಅರವಿಂದ ಮಾಲಗತ್ತಿ- ಮೂರನೆಯ ಕಣ್ಣು, ಮೂಕನಿಗೆ ಬಾಯಿ ಬಂದಾಗ, ಕಪ್ಪುಕಾವ್ಯ, ಎಲ್. ಹನುಮಂತಯ್ಯ - ಕಪ್ಪು ಕಣ್ಣಿನ ಹುಡುಗಿ, ಅವ್ವ ಅವ್ವನ ಕವಿತೆ, ಸತ್ಯಾನಂದ ಪಾತ್ರೋಟ - ಕರಿಯ ಕಟ್ಟಿದ ಕವನ, ನನ್ನ ಕನಸಿನ ಹುಡುಗಿ, ಕರಿನೆಲದ ಕಲೆಗಳು, ಚೆನ್ನಣ್ಣ ವಾಲೀಕಾರ - ಮರದ ಮೇಲಿನ ಕಾಳಿ, ಕರಿತೆಲಿ ಮಾನವನ ಜೀವ, ಬಂಡೆದ್ದ ದಲಿತರ ಬೀದಿ ಹಾಡುಗಳು, ಪ್ಯಾಂಥರ್ ಪದ್ಯಗಳು, ಇಂಧೂದರ ಹೊನ್ನಾಪುರ - ಬಂಡಾಯ, ಮುನಿವೆಂಕಟಪ್ಪ - ಕೆಂಡದ ನಡುವೆ, ಸ್ವಾಭಿಮಾನದ ಬೀದಿಗೆ ಇನ್ನೂ ಮುಂತಾದ ಸಾಹಿತ್ಯ ಕೃತಿಗಳಲ್ಲಿ ಅಂಬೇಡ್ಕರ್ ಪ್ರಭಾವವನ್ನು ಗುರುತಿಸಬಹುದು.

ಅಂಬೇಡ್ಕರ್ ಕೂಡ ಅಪಮಾನಕ್ಕೆ ಒಳಗಾದ ಸಮುದಾಯದಿಂದ ಬಂದವರು. ಅಸ್ಪೃಶ್ಯನಾಗಿ ಹುಟ್ಟಿಕೊಂಡ ನನಗೆ ಎಂಥ ಅಪಮಾನಗಳು, ಅವಹೇಳನಗಳು ಈ ಅಸ್ಪೃಶ್ಯತೆಯನ್ನು ಹೇಗಾದರೂ ತೊಲಗಿಸಬೇಕು. ನನ್ನ ಜನರಿಗೆ ಸ್ವಾತಂತ್ರ್ಯ ತಂದುಕೊಡಬೇಕು ಎಂಬ ಛಲ ಅವರಲ್ಲಿ ಬಲವಾಗಿ ಬೇರೂರಿತು. ಅಂಬೇಡ್ಕರ್‌ರವರ ಜಾತಿರಹಿತ ಸಮಾಜದ ಕನಸು ಶೋಷಿತ ಸಮುದಾಯಗಳು ಮುಖ್ಯವಾಹಿನಿಗೆ ತರುವ ಹಂಬಲ, ಹೋರಾಟದ ಹಾಡುಗಳಲ್ಲಿ ಬಿತ್ತರಗೊಳ್ಳುತ್ತಾ ಹೋಗುತ್ತದೆ.

“ನಾಡ ನಡುವಿನಿಂದ ಸಿಡಿದ
ನೋವಿನ ಕೂಗೆ
ಆಕಾಶದ ಅಗಲಕ್ಕೂ
ನಿಂತ ಆಲವೇ
ಕೋಟಿ ಕೋಟಿ ಕಪ್ಪು ಜನರ
ಮೊಟ್ಟ ಮೊದಲ ಮಾತೆ
ಜಾತಿಯನ್ನು ಹೂತಿಬಿಡಲು
ಲಕ್ಷ ಲಕ್ಷ ಜನರನು

ಕಟ್ಟಿ ಕ್ರಿಯಾರಂಗಕಿಳಿದ
ಸ್ವಾಭಿಮಾನ ಸಮುದ್ರ"    (ಅಂಬೇಡ್ಕರ್-ಡಾ. ಸಿದ್ದಲಿಂಗಯ್ಯ)

ಅಂಬೇಡ್ಕರ್‌ರವರು ದಲಿತ ಮತ್ತು ಶೋಷಿತ ಜನಾಂಗಗಳ ಆಶಾಕಿರಣವಾಗಿ ಕಂಡುಬರುತ್ತಾರೆ. ಸಮಾಜದಲ್ಲಿ ತುಂಬಿಹೋದ ಕ್ರೂರ ವ್ಯವಸ್ಥೆಯ ನಡುವೆ ಹೋರಾಟಗಾರರಾಗಿ ಬಂದ ಹೋರಾಟದ ಕಿಡಿಯಾಗಿದ್ದಾರೆ. ಬಾಯಿ ಕೊಟ್ಟವರು ಬಾಯಿ ಬಿಡದೆ ಶೋಷಣೆಗೆ ಒಳಗಾಗಿ ಜನರಿಗೆ ಮಾದರಿಯಾಗಿದ್ದಾರೆ. ಅಂಬೇಡ್ಕರ್‌ರವರ ಜಾತಿ ನಿರ್ಮೂಲನದ ವಿಚಾರಗಳು ನಿಮ್ನವರ್ಗ ಮತ್ತು ಅಸ್ಪೃಶ್ಯ ಜಾತಿಯ ಸುತ್ತ ಕೇಂದ್ರೀಕರಿಸಿದ್ದವು.

ಶತಶತಮಾನದ ಸೇಡಿನ ಕಿಡಿ
ಜಗದೊಲವಿನ ಜ್ಯೋತಿಯೇ
ಒಡಲಾಳದಿಂದ ಬಂದ
ಅರಿವಿನ ಸ್ಫೋಟವೇ
ಕದಲಿಸಿದ ಬಂಡೆಗಲ
ಬದಲಿಸಿವೆ ಮಾರ್ಗಗಳ
ಕಾಡ್ಗಿಚ್ಚು ಕಡಲಿನಲ್ಲಿ
ಜ್ವಾಲೆಗೆ ಜೇನಾದವನೆ

ದಲಿತರ ಮಡುಗಟ್ಟಿದ ನೋವಿನ ಅಕ್ಷರಗಳೇ ಇರದ ಅಲಿಖಿತ ಇತಿಹಾಸಕ್ಕೆ ಅಂಬೇಡ್ಕರ್ ಅಕ್ಷರ ಕೊಟ್ಟವರು, ಇತಿಹಾಸ ಕೊಟ್ಟವರು. ಆಧುನಿಕ ಭಾರತದ ಸಮಾಜವಾದಿ ಚಿಂತನೆಯ ಇತಿಹಾಸದಲ್ಲಿ ಅಂಬೇಡ್ಕರ್ ಅವರ ಕೊಡುಗೆ ಅನನ್ಯವಾದುದ್ದು. ಭಾರತೀಯ ಶೋಷಿತ ವರ್ಗವಾದ ಅಸ್ಪೃಸ್ಯರ ಬದುಕಿನ ವರ್ಗದಿಂದ ಮೂಡಿಬಂದ ಚಿಂತನೆ ಇದು. ಮಾರ್ಕ್ಸ್ ಚಿಂತನೆ ಕಾರ್ಮಿಕ ವರ್ಗದ ಜೊತೆ ಬಿಡಿಸಲಾರದ ಸಂಬಂಧವನ್ನು ಸ್ಥಾಪಿಸಿಕೊಂಡಿದೆಯೋ ಹಾಗೆ ಅಂಬೇಡ್ಕರ್‌ರ ಚಿಂತನೆ ಅಸ್ಪೃಶ್ಯರ ಬದುಕಿನ ಜೊತೆ ಅನಿವಾರ್ಯ ಸಂಬಂಧ ಹೊಂದಿದೆ. ಕಾರ್ಮಿಕವರ್ಗದ ವಿಮೋಚನೆ ಸಾಧ್ಯವಿಲ್ಲ ಎಂದು ಮಾರ್ಕ್ಸ್ ಭಾವಿಸಿದ ಹಾಗೆ ಅಸ್ಪಶ್ಯರು ವಿಮೋಚನೆಯಾಗದೆ ಇಡೀ ಭಾರತೀಯ ಸಮಾಜದ ವಿಮೋಚನೆ ಸಾಧ್ಯವಿಲ್ಲ ಎಂದು ಅಂಬೇಡ್ಕರ್ ಭಾವಿಸಿದ್ದರು.

ಅಂಬೇಡ್ಕರ್ ಇಂದು ನಮಗೆ ಇಷ್ಟು ಪ್ರಸ್ತುತವಾಗಿರುವುದು ಈ ಕಾರಣಕ್ಕೆ. ದಲಿತ ಸಮುದಾಯದ ನೋವು ಬರಿ ಹಸಿವಿದ್ದವನದ್ದಲ್ಲ. ಬಡತನದಲ್ಲಿ ಸಮಾಜದ ಉಳಿದ ಸಮುದಾಯಗಳ ಸಂಕಟಕ್ಕಿಂತ ಹೆಚ್ಚು ಆಳವಾದ ಬಹುಮುಖಿಯಾತನೆ ಅವರದು. ಸಮಾಜದ ಎಲ್ಲಾ ಬಡವರಿಗಿಂತ ಹೆಚ್ಚಿನ ಭಾರವನ್ನು ದಲಿತರು ಹೊತ್ತಿದ್ದಾರೆ. ಹೀಗೆ

ಅಂಬೇಡ್ಕರ್ ಕಣ್ಣಲ್ಲಿ ಕವಿಗಳು ಕಂಡ ಕಾವ್ಯ ಸಾಹಿತ್ಯಕ್ಕೆ ಬಹುದೊಡ್ಡ ಕೊಡುಗೆ. ಅಂಬೇಡ್ಕರ್ ಆಶಯಗಳು ಜನರಿಗೆ ಅರಿವಿಗೆ ಬಂದದ್ದು ಹೋರಾಟದ ಹಾಡುಗಳ ಮೂಲಕವೆಂದು ಹೇಳಬಹುದು.

"ಹರಿಜನರೊಳು ಜನ್ಮ ತಳೆಯಬಾರದು
ತಳೆದರು ವಿದ್ಯೆ ಕಲಿಯಲೇ ಬಾರದು
ವಿದ್ಯೆ ಕಲಿಯ ಬುದ್ಧಿ ಕಣ್ಣೊಂದು ತರುವುದು
ಮಾನಾಪನಾದ ಮಾನವರಿವಾಗುವುದು"

ಡಿ.ಗೋವಿಂದದಾಸ್

ಇಂತಹ ಹಾಡುಗಳಲ್ಲಿ ಅಂಬೇಡ್ಕರ್‌ರವರ ಆಶಯಗಳು ಅಭಿವ್ಯಕ್ತಗೊಳ್ಳುತ್ತಾ ಹೋಗುತ್ತದೆ. ಶತಮಾನಗಳಿಂದ ನೋವುಂಡು ಬದುಕುತ್ತಿರುವ ಜನರಿಗೆ ತಮ್ಮ ಶೋಷಣೆಯ ಬಗೆಗೆ ಅರಿವು ಮೂಡಬೇಕು. ಸಮಾಜದ ಮುಖ್ಯವಾಹಿನಿಗೆ ಬರಬೇಕು. ಅಕ್ಷರದ ಅರಿವಿನಿಂದ ತಾವಾಗಿಯೇ ಎಲ್ಲವನ್ನು ಅರ್ಥೈಸಿಕೊಳ್ಳಬೇಕು. ಈ ಉದ್ದೇಶ ಸಾಧನೆಗಾಗಿ ಅಂಬೇಡ್ಕರ್‌ರವರು ಕೆಳಜಾತಿ ಜನರಿಗೆ ಅಕ್ಷರ ಕಲಿಯುವ ಹಂಬಲ ಮೂಡಿಸಿದರು. ಶಿಕ್ಷಣ ಪಡೆಯುವ ಹಕ್ಕನ್ನು ದೊರಕಿಸಿಕೊಟ್ಟರು. ಹರಿಜನರು ಜನ್ಮ ತಳೆಯಬಾರದೆಂಬ ಪದ್ಯದ ಸಾಲುಗಳು ದಲಿತ ಲೋಕದ ದುಃಸ್ಥಿತಿಯನ್ನು ನೋವನ್ನು ಬಿಂಬಿಸುವಂತದ್ದು. ಜಾತಿ ನಿಂದನೆಗೆ ಒಳಗಾದ ಅಸ್ಪೃಶ್ಯರ ಮನಸ್ಥಿತಿಯನ್ನು ಇಲ್ಲಿ ಕಾಣಬಹುದು.

ದೇವನೂರು ಮಹಾದೇವರವರ 'ಈ ಓದೋ ಛಾನ್ಸ್ ಬರಬಾರದಿತ್ತು' ಎಂಬ ಮಾತು ದಲಿತ ವರ್ಗದಿಂದ ಹುಟ್ಟಿಬಂದ ಈ ಬಗೆಯ ಸೂಕ್ಷ್ಮ ಮನಸ್ಸಿನ ಧೋರಣೆಗಳ ವಿಷಾದವು ತಿಳಿದುಬರುತ್ತದೆ. ಇದು ಮಾನವೀಯತೆಯೇ ಇಲ್ಲದ ವೈದಿಕ ಹಿನ್ನೆಲೆಯ ಕ್ರೂರ ಮನಸ್ಸುಗಳನ್ನು ತಟ್ಟಿರುವುದು ಒಂದು ದುರಂತವಾಗಿದೆ.

"ಶಿಕ್ಷಣ ಸಂಘಟನೆ ಹೋರಾಟ
ಮುತ್ತಿನಂತ ಮೂರೇ ಸೂತ್ರ
ದುಡಿವ ಜನಕ್ಕೆ ಧೈರ್ಯ ಕೊಡುವಂಥ
ದಲಿತ ಜನಕ್ಕೆ ಪ್ರಜ್ಞೆ ನೀಡುವಂತ
ಇದುವೇ ಓದು, ಇದುವೇ ಬರಹ
ಇದುವೇ ಸ್ವಾಭಿಮಾನವೆಂದ ಅಂಬೇಡ್ಕರಾ"

ಅಂಬೇಡ್ಕರ್ ಪ್ರಭಾವಕ್ಕೆ ಒಳಗಾಗಿ ಆಧುನಿಕ ಸಂದರ್ಭದಲ್ಲಿಯೂ ಇಂತಹ ಹಾಡುಗಳು ರಚನೆಯಾಗುತ್ತವೆ. ಇಂತಹ ಹಾಡುಗಳು ಅಂಬೇಡ್ಕರ್‌ವಾದದ ಆಶಯಗಳನ್ನು ಜನತೆಗೆ ತಲುಪಿಸುವಲ್ಲಿ ಇಂದಿಗೂ ದುಡಿಯುತ್ತಿರುವುದು ಅಚ್ಚರಿಯ

ಸಂಗತಿ. ಅಸ್ಪೃಶ್ಯತೆಯನ್ನು ತೊಲಗಿಸಲು ಅಂಬೇಡ್ಕರ್ ಶಿಕ್ಷಣ, ಸಂಘಟನೆ, ಹೋರಾಟಗಳೆಂಬ ಮೂರು ಸೂತ್ರ ಬಳಸಿಕೊಂಡು ಜಾತಿ ಮತ್ತು ವರ್ಗ ಒಂದೇ ನಾಣ್ಯದ ಎರಡು ಮುಖಗಳೆಂದು ಹೇಳಿದ ಅಂಬೇಡ್ಕರ್ ಜಾತಿರಹಿತ, ವರ್ಗರಹಿತ ಸಮಾಜವನ್ನು ಕಟ್ಟಲು ಈ ಮೂರು ಸೂತ್ರಗಳನ್ನು ಅಡಿಪಾಯವನ್ನಾಗಿ ಬಳಸಿಕೊಂಡರು. (ಡಾ. ಎ.ಎಸ್. ಶೇಖರ್, ಮೊದಲ ತಲೆಮಾರಿನ ದಲಿತ ಸಾಹಿತಿಗಳು, ಪು.ಸಂ.-೨೧, ಸಿ. ದಾನಪ್ಪ ನಿಲೋಗಲ್- ನೆತ್ತರದ ಹೊಳೆಯಲ್ಲಿ ಕತ್ತೆತ್ತಿದ ಹಾಡು, ಪು.ಸಂ.-೧) ವರ್ಗರಹಿತ ಸಮಾಜವನ್ನು ಕಟ್ಟಲು ಈ ಮೂರು ಸೂತ್ರಗಳನ್ನು ಅಡಿಪಾಯವನ್ನಾಗಿ ಬಳಸಿಕೊಂಡರು.

ಅಸ್ಪೃಶ್ಯರೆಲ್ಲರೂ ಶಿಕ್ಷಣವನ್ನು ಪಡೆದು, ತಮ್ಮ ಸ್ಥಿತಿಯ ಬಗೆಗಿನ ಅರಿವು ಮೂಡಬೇಕು. ನಂತರ ತಮ್ಮಗಾಗುತ್ತಿರುವ ಶೋಷಣೆಯ ವಿರುದ್ಧ ಹೋರಾಟದಲ್ಲಿ ತೊಡಗಬೇಕು. ಆಗ ಮಾತ್ರ ಜಾತಿ ನಿರ್ಮೂಲನೆಯ ವಿಮೋಚನೆ ಸಾಧ್ಯವೆಂಬುದು ಅಂಬೇಡ್ಕರ್ ಆಶಯವಾಗಿತ್ತು.

"ದೊಡ್ಡಗೌಡರ ಬಾಗಿಲಿಗೆ
ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲುಕಯ್ಯಿ
ಕಂಬ ಅವರ ಹುಟ್ಟಿಗೆ
ಅವರ ತೋಟದ ತೆಂಗಿನಲ್ಲಿ
ನಮ್ಮ ರಕ್ತದ ಎಳನೀರು
ಅವರ ಅಮಲಿನ ಗುಂಗಿನಲ್ಲಿ
ಕೂಲಿ ಹೆಣ್ಣಿನ ಕಣ್ಣೀರು"

ದಲಿತರ ಶ್ರಮವೆಲ್ಲ ವಿನಿಯೋಗವಾಗುತ್ತಿರುವುದು ಭೂಮಾಲೀಕರ ಪ್ರಗತಿಗೆ ಅವರ ಪ್ರತಿಯೊಂದು ವೈಭೋಗದಲ್ಲೂ ದಲಿತರ ನರಳಿಕೆ ಮತ್ತು ಸಂಕಟಗಳಿವೆ. ದಲಿತರ ಬೇವರು ಮತ್ತು ಕಣ್ಣೀರಿನಿಂದ ಗೌಡರು ಬಲಿಷ್ಠರಾಗುತ್ತಾ ಬಂದರು. ಧಣಿ, ಕೂಲಿಕಾರ ಎಂಬ ವರ್ಗ ಅಸಮಾನತೆ ಮೂಡಿಬಂದು ದುಡಿವ ವರ್ಗದವರಾದ ಕೂಲಿಕಾರರ ಶ್ರಮಕ್ಕೆ ಬಂದ ಎಲ್ಲಾ ಪ್ರತಿಫಲವನ್ನು ಧಣಿಗಳು ಪಡೆಯುತ್ತಿದ್ದರು. ದಿನವಿಡೀ ದುಡಿದರೂ ಉಪವಾಸದಿಂದ ನರಳುವ ಸ್ಥಿತಿಯಿಂದ ಕೂಲಿಕಾರ ಮುಕ್ತನಾಗಲು ಸಾಧ್ಯವೇ ಇರಲಿಲ್ಲ. ಬಡಜನರು ಭೂ ಮಾಲೀಕರನ್ನು ಆಶ್ರಯಿಸಬೇಕಾಗಿತ್ತು. ಅವರ ಹೊಲ, ಗದ್ದೆ, ತೋಟಗಳಲ್ಲಿ ದುಡಿದು ಕೊಟ್ಟಷ್ಟು ಕೂಲಿಯಿಂದಲೇ ಜೀವನ ಸವೆಸಬೇಕಿತ್ತು.

ಭೂಮಾಲೀಕರ ಕೈಕೆಳಗೆ ದುಡಿಯುತ್ತಿದ್ದ ಕೂಲಿ ಹೆಂಗಸರು ದೌರ್ಜನ್ಯಕ್ಕೆ ಒಳಗಾಗುತ್ತಿದ್ದರು. ಯಾವುದನ್ನು ಪ್ರಶ್ನಿಸದೇ ವ್ಯವಸ್ಥೆ ನಂಬಿಸಿಕೊಂಡು ಬಂದ ರೀತಿಯಲ್ಲಿಯೇ ಅವರು ನಡೆಯುತ್ತಿದ್ದರು ಇಂತಹ ವ್ಯವಸ್ಥೆ ದೂರವಾಗಿ ಕೂಲಿಕಾರರಿಗೆ ಸ್ವಾತಂತ್ರ್ಯ ಲಭ್ಯವಾಗಬೇಕು ಎಂಬುದು ಅಂಬೇಡ್ಕರ್‌ರವರ ಆಶಯವಾಗಿತ್ತು.

ಕಾರ್ಮೋಡ ಕವಿದಿತ್ತು ಕಗ್ಗಪ್ಪು ಕೆದರಿತ್ತು
ಕಡುರೌದ್ರ ತುಂಬಿತ್ತು ಬಾನಿನಲ್ಲಿ
ಕ್ರಾಂತಿ ರಕೆಗೋಗೊಟ್ಟು ಕಪ್ಪು ವಸ್ತ್ರವ ತೊಟ್ಟು
ಭೂದೇವಿ ನಿಂತಿತ್ತು ರಾತ್ರಿಯಲಿ

ದಲಿತರ ಬದುಕಿನ ಹತಾಶ ಮನೋಭಾವ ನೋವು ಸಂಕಟಗಳು ಸಹಿಸಲಾರದ ಹೋರಾಟದ ಸ್ವರೂಪವನ್ನು ಪಡೆಯುತ್ತಿರುವುದು ಇಲ್ಲಿ ವ್ಯಕ್ತವಾಗಿದೆ. ಎಲ್ಲಾ ಶೋಷಿತ ಸಮುದಾಯಗಳು ಒಗ್ಗಟ್ಟಾಗಿ ತಮ್ಮನ್ನು ದಬ್ಬಾಳಿಕೆ ಒಳಮಾಡಿದವರನ್ನು ಬಗ್ಗು ಬಡಿಯಲು ಸಿದ್ಧರಾಗಿದ್ದೇವೆ. ಶತ-ಶತಮಾನಗಳಿಂದ ದಲಿತರಲ್ಲಿ ಅಡಗಿದ್ದ ನೋವುಗಳು ಸಂಕಟಗಳು ಅವರ ಹೋರಾಟಕ್ಕೆ ಮೂಲ ಕಾರಣವಾಗಿದೆ. ದೇವರು, ಧರ್ಮದ ಹೆಸರಿನಲ್ಲಿ ತುಳಿತಕ್ಕೊಳಗಾದ ಜನರು ತಮ್ಮ ಮೂಲ ಅವಶ್ಯಕವಾದ ಆಹಾರವನ್ನು ಪಡೆಯಲು ಸಂಘರ್ಷಕ್ಕಿಳಿದಿದ್ದರು. ತಮ್ಮ ದುಡಿಮೆಗೆ ತಕ್ಕ ಫಲ ಸಿಗುವಂತೆ ಆಗ್ರಹಿಸಿದರು. ಇಂತಹ ಹೋರಾಟಕ್ಕೆ ಜರುಗಬೇಕೆಂದು ಅಂಬೇಡ್ಕರ್‌ರವರು ಹಂಬಲಿದರು. ಈ ರೀತಿಯ ಸಂಘರ್ಷಗಳಲ್ಲಿ ದಲಿತರೆಲ್ಲರೂ ಒಟ್ಟಾಗಿ ಪಾಲ್ಗೊಂಡಾಗ ಎಂತಹ ಸಮಸ್ಯೆಗಳ್ನಾದರೂ ಪರಿಹರಿಸಬಹುದೆಂದು ಅವರು ಈಗಾಗಲೇ ಅರಿತಿದ್ದರು.

ಹೀಗೆ ಹೋರಾಟದ ಹಾಡುಗಳ ಮೇಲೆ ಅಂಬೇಡ್ಕರ್‌ವಾದದ ಪ್ರಭಾವವನ್ನು ಗುರುತಿಸಬಹುದು. ತಮ್ಮ ಬಾಲ್ಯದಿಂದಲೂ ಅಸ್ಪೃಶ್ಯತೆಯ ಕರಾಳ ಮುಖಗಳನ್ನು ಕಂಡಿದ್ದ ಅಂಬೇಡ್ಕರ್ ಜಾತಿ ವಿನಾಶಕ್ಕಾಗಿ ಪಟ್ಟ ಶ್ರಮ ಬಹಳ ದೊಡ್ಡದು. ಇವರ ನಂತರ ಹೊಸ ಸಮಾಜವನ್ನು ಕಟ್ಟುವ ಕಾರ್ಯ ಸಮಾನತೆಯನ್ನು ಬಿತ್ತುವ ಕೆಲಸ ಮುಂದುವರಿದದ್ದು ದಲಿತ ಸಾಹಿತ್ಯದ ಮುಖೇನ. ಹೋರಾಟದ ಹಾಡುಗಳ ಕಟ್ಟುವಿಕೆಯ ನೆಲೆಯಲ್ಲಿ ಅಂದು ದಮನಿತರ ಸಮುದಾಯಗಳ ಉದ್ಧಾರಕ್ಕಾಗಿ ಶ್ರಮಿಸಿದ ಅಂಬೇಡ್ಕರ್ ದಲಿತ ಸಾಹಿತ್ಯದಲ್ಲಿ ಹೋರಾಟದ ಹಾಡುಗಳಲ್ಲಿ ಧ್ವನಿಸುತ್ತಲೇ ಇದ್ದಾರೆ.

ಅಡಿಟಿಪ್ಪಣಿ :

೧. ಡಾ.ಪ್ರಹ್ಲಾದ ಅಗಸೆಕಟ್ಟೆ-ದಲಿತ ಬಂಡಾಯ ಕಾವ್ಯ ಮತ್ತು ವಿಚಾರಧಾರೆಗಳು, ಪು.ಸಂ. ೬೧

೨. ಡಾ.ಎಚ್.ಟಿ. ಪೋತೆ, ಲೋಕಮಿತ್ರರ ನಡುವೆ, ಪು.ಸಂ.೪೧,

೩. ಡಾ. ಸಿದ್ದಲಿಂಗಯ್ಯನವರ ನನ್ನ ಜನಗಳು ಮತ್ತು ಇತರೆ ಕವಿತೆಗಳು, ಪು.ಸಂ. ೨೬

೪. ಡಾ.ಎಂ.ಎಸ್.ಶೇಖರ್, ಮೊದಲ ತಲೆಮಾರಿನ ದಲಿತ ಸಾಹಿತಿಗಳು, .ಪು.ಸ.೨೧

೫. ಅಂಬೇಡ್ಕರಾ ಹೇಳಿದ ಮಾತು- ಸಿ. ದಾನಪ್ಪ ನಿಲೋಗಲ್-ನೆತ್ತರದ ಹೊಳೆಯಲ್ಲಿ ಕತ್ತೆತ್ತಿದ ಹಾಡು.ಪು..೧

೬. ಡಾ. ಸಿದ್ದಲಿಂಗಯ್ಯ, ಆಯ್ದ ಕವಿತೆಗಳು, ಬೆಳ್ಚಿಯ ಹಾಡು, ಪು.ಸಂ. ೨೧